<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.</u>

**ಸಿ.ಸಿ. ಸಂಖ್ಯೆ.18/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ವೇಣುಗೋಪಾಲ್ | ಸಿ.ಡಬ್ಲ್ಯೂ: 4 | ಪಿ.ಡಬ್ಲ್ಯೂ:2 |
| ತಂದೆಯ ಹೆಸರು | ಲೇಟ್ ವೈಕುಂಟ | | |
| ವಯಸ್ಸು | 48 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸ ಸ್ಥಳ | ಕೊಟ್ಟಿಗೆಹಾರ, ಮೂಡಿಗೆರೆ ತಾ: | | |

ದಿನಾಂಕ: 19.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದ (ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ )</u>

1. 1 ರಿಂದ 10 ರ ಆರೋಪಿಗಳು ನನಗೆ ಪರಿಚಯ ಇಲ್ಲ, ಅವರನ್ನು ನಾನು ನೋಡಿದರೆ ಗುರುತಿಸಬಲ್ಲೆ. ದಿ: 12.06.2011 ರಂದು ಕೊಟ್ಟಿಗೆಹಾರ ಬಸ್ಸು ನಿಲ್ದಾಣದ ನನ್ನ ಅಂಗಡಿಯಲ್ಲಿ ಬೆಳಿಗ್ಗೆ 6.30 ರ ಸುಮಾರಿಗೆ 10 ರಿಂದ 12 ಜನ ಸ್ಕೂಲ್ ಬ್ಯಾಗ್ ಹಿಡಿದುಕೊಂಡು ಬಂದಿದ್ದರು. ಅವರು ಬ್ರೌನ್ ಶುಗರ್ ಇದೆ ತೆಗೆದುಕೊಳ್ಳುತ್ತೀರಾ ಎಂದು ನನಗೆ ಕೇಳಿದ್ದರು. ಬ್ಯಾಗ್ ಅನ್ನು ತೆಗೆದು ತೋರಿಸಿದರು. ನಾನು ಬೇಡ ಎಂದು ಹೇಳಿದಾಗ ಅವರು ಖಾಸಗಿ ಬಸ್ಸು ನಿಲ್ದಾಣದ ಕಡೆಗೆ ಹೋದರು. ಬ್ಯಾಗ್ ಅನ್ನು ತೆಗೆದು ತೋರಿಸಿದಾಗ ಸಕ್ಕರೆ ಪುಡಿಯ ರೀತಿ ವಸ್ತು ಇತ್ತು. ನಂತರ ಪೊಲೀಸರು ಬಂದು ಅವರುಗಳನ್ನು ಹಿಡಿದುಕೊಂಡು ಠಾಣೆಗೆ ಕರೆದುಕೊಂಡು ಹೋದರು. ನನ್ನನ್ನು ಘಟನೆಯ ಬಗ್ಗೆ ವಿಚಾರಿಸಿದ್ದರು. ಆ ದಿನ ನಾನು ನೋಡಿದ ವ್ಯಕ್ತಿಗಳನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ